ಪ್ರಜಾವಾಣಿ ಶನಿವಾರ • ಜನವರಿ 6, 2018

### ಹಾವೇರಿಯಲ್ಲಿ ನಡೆದ ಪತ್ರಿಕಾಗೋಷ್ಠಿ: ಕೃಷಿ ಬೆಲೆ ಆಯೋಗದ ಅಧ್ಯಕ್ಷ ಪ್ರಕಾಶ್ ಎನ್. ಕಮ್ಮರಡಿ ಅಭಿಮತ

# ಕೃಷಿಯಲ್ಲಿ ಒಂದು ದೇಶ ಒಂದು ಬೆಲೆ ಅಸಾಧ್ಯ

ಪ್ರಜಾವಾಣಿ ವಾರ್ತೆ

ಹಾವೇರಿ: 'ಒಂದು ದೇಶ ಒಂದು ಬೆಲೆ'ಯು ಕೃಷಿಯಲ್ಲಿ ಅಸಾಧ್ಯ. ಭೌಗೋಳಿಕತೆ, ಆರ್ಥಿಕತೆ, ಹವಾಮಾನ ಮತ್ತಿತರ ವಿಚಾರಗಳನ್ನು ಪರಿಗಣಿಸಿ ಕೇಂದ್ರ ಸರ್ಕಾರ ಬೆಂಬಲ ಬೆಲೆ (ಎಂ.ಎಸ್.ಪಿ) ನಿಗದಿ ಪಡಿಸಬೇಕು' ಎಂದು ಕೃಷಿ ಬೆಲೆ ಆಯೋಗದ ಅಧ್ಯಕ್ಷ ಪ್ರಕಾಶ್ ಎನ್. ಕಮ್ಮರಡಿ ಇಲ್ಲಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,'ಅಲ್ಲದೇ, ಎಂ.ಎಸ್.ಪಿ.ಗೂ ಎಂ.ಆರ್.ಪಿ. (ಗರಿಷ್ಠ ಚಿಲ್ಲರೆ ದರ)ಯಂತೆ ಕಾನೂನು ಬಲ ನೀಡುವ ಕಾಯ್ದೆ ಸಿದ್ಧಗೊಳ್ಳುತ್ತಿದೆ. ಕಾಯ್ದೆ ಪ್ರಕಾರ ಎಂ.ಎಸ್.ಪಿ.ಗಿಂತ ಮಧ್ಯವರ್ತಿ ಅಥವಾ ವ್ಯಾಪಾರಿ ಕಡಿಮೆಗೆ ಖರೀದಿಸಿದರೆ ಅಪರಾಧ ಆಗಲಿದೆ' ಎಂದರು.

'₹5 ಸಾವಿರ ಕೋಟಿಗೂ ಹೆಚ್ಚು ಬೆಲೆ ಸ್ಥಿರೀಕರಣ ನಿಧಿಯನ್ನು ಮೀಸಲು ಇಡಬೇಕು. ರೈತರಿಮದ ಖರೀದಿಸಿದ ತಿಂಗಳೊಳಗೆ ಹಣ ಪಾವತಿಸದಿದ್ದರೆ ಬಡ್ಡಿಯನ್ನೂ ನೀಡಬೇಕು. ಗುಣಮಟ್ಟವನ್ನು ಹೊಲದಲ್ಲೇ ನಿರ್ಧರಿಸಬೇಕು. ಸಾಗಾಣಿಕೆ ವೆಚ್ಚವನ್ನು ಸರ್ಕಾರ ಭರಿಸಬೇಕು. ಅಡಮಾನ ಸಾಲ ವ್ಯವಸ್ಥೆ ವ್ಯಾಪಕಗೊಳಿಸಬೇಕು ಎಂಬ ಶಿಫಾರಸುಗಳನ್ನು ನೀಡಲಾಗಿದ್ದು, ಬಜೆಟ್‌ನಲ್ಲಿ ಜಾರಿಗೊಳಿಸುವ ಭರವಸೆ ಇದೆ' ಎಂದರು.

**ಸರ್ಕಾರಕ್ಕೆ ವರದಿ:** 'ವಾರದ ಹಿಂದೆ ರಾಜ್ಯ ಸರ್ಕಾರಕ್ಕೆ ವರದಿ ಸಲ್ಲಿಸಿದ್ದು, ಬೆಳೆಗಳ ಉತ್ಪಾದನಾ ವೆಚ್ಚದಿಂದ ಮಾರುಕಟ್ಟೆ ಬೆಲೆ ತನಕದ ರಾಜ್ಯ, ದೇಶ, ವಿಶ್ವದ ವಸ್ತುಸ್ಥಿತಿಯನ್ನು ಸಲ್ಲಿಸಲಾಗಿದೆ. ಪ್ರಮುಖ 26 ಬೆಳೆಗಳ ಏಪ್ರಿಲ್ ತನಕದ ಬೆಲೆ ಮುನ್ಸೂಚನೆಯನ್ನು ಮಾರುಕಟ್ಟೆವಾರು ನೀಡಲಾಗಿದೆ' ಎಂದರು.

ಮೈಕ್ರೋಸಾಫ್ಟ್ ಸಂಸ್ಥೆ ಸಹಯೋಗದಲ್ಲಿ 'ಬೆಲೆ ಮುನ್ಸೂಚನೆ' ಸಾಫ್ಟ್‌ವೇರ್ ಅಭಿವೃದ್ಧಿ ಪಡಿಸಿದ್ದೇವೆ. ಇದು ಬಹುತೇಕ ನಿಖರ ಬೆಲೆಯನ್ನು ನೀಡುತ್ತದೆ. ಆದರೆ, ಪ್ರಕೃತಿ ವಿಕೋಪ, ಯುದ್ಧ ಮತ್ತಿತರ ಬಾಹ್ಯ ವಿಚಾರಗಳು ಪ್ರಭಾವ ಬೀಳಬಹುದು' ಎಂದ ಅವರು, 'ನೋಟು ರದ್ಧತಿ ಮತ್ತು ಸರಕು ಮತ್ತು ಸೇವಾ ತೆರಿಗೆ (ಜಿ.ಎಸ್.ಟಿ.)ಯಿಂದಾಗಿ ಮಾರುಕಟ್ಟೆಯಲ್ಲಿ ಸಹಜ ರೀತಿಯ ವಹಿವಾಟು ನಡೆಯುತ್ತಿಲ್ಲ. ಇದೂ ಕೃಷಿ ಉತ್ಪನ್ನಗಳ ಬೆಲೆ ಮೇಲೆ ಪ್ರಭಾವ ಬೀರುತ್ತಿದೆ' ಎಂದರು.

**ದತ್ತು ಸ್ವೀಕಾರ:** ಬ್ಯಾಡಗಿ ತಾಲ್ಲೂಕಿನ ಖರ್ದು ವೀರಾಪುರ ಗ್ರಾಮವನ್ನು ದತ್ತು ಸ್ವೀಕರಿಸಲಾಗಿದ್ದು, ಕೃಷಿ ಆದಾಯ ಮತ್ತು ರೈತರ ಕಲ್ಯಾಣ ವೃದ್ಧಿ ಬಗ್ಗೆ ಪ್ರಯೋಗ ನಡೆಯುತ್ತಿದೆ. ಇಲ್ಲಿನ ರೈತರ ಆರೋಗ್ಯ, ಆದಾಯ, ಕಲ್ಯಾಣ, ಭವಿಷ್ಯದ ಆರೋಗ್ಯದ ಕುರಿತು ತಳಮಟ್ಟದ ವರದಿ ಸಿದ್ಧಪಡಿಸಿದ್ದೇವೆ ಎಂದು ಹೇಳಿದರು.

ಇಲ್ಲಿ ಹೊಸ ಬೆಳೆ ಪದ್ಧತಿ, ಅರಣ್ಯ ಕೃಷಿ, ಉಪ ಕೃಷಿ ಇತ್ಯಾದಿ ಪ್ರಯೋಗದ ಜೊತೆ, ಅಡಮಾನ ಸಾಲ ವ್ಯವಸ್ಥೆ ಹೆಚ್ಚಳಕ್ಕೂ ಸೂಚಿಸಿದ್ದೇವೆ ಎಂದರು.

**ಫಲಿತಾಂಶ:** 'ಆಯೋಗವು ಕಳೆದ ಮೂರು ವರ್ಷಗಳಲ್ಲಿ ನೀಡಿದ ವರದಿಯ ಫಲಿತಾಂಶವು ಸರ್ಕಾರದ ನಿರ್ಧಾರಗಳಲ್ಲಿ ಕಂಡುಬಂದಿದೆ. ಇದು ರಾಜ್ಯದ ಶೇ 90 ರೈತರ ಬದುಕಿನ ಮೇಲೆ ಬೀರಿದೆ' ಎಂದ ಅವರು, 'ಬೆಲೆ ನಿರ್ಣಯಕ್ಕೆ ಪೂರಕವಾದ ಉತ್ಪಾದನಾ ವೆಚ್ಚದ ಅಧ್ಯಯನವನ್ನು ಆಯೋಗ ಮಾಡಿದೆ' ಎಂದರು.

ನಮ್ಮ ವರದಿ ಆಧಾರದಲ್ಲಿ ಕೇಂದ್ರ ಸರ್ಕಾರವು ಕಾಳು ಮೆಣಸು ಆಮದಿನ ಮೇಲೆ ಕೆ.ಜಿ.ಗೆ ಕನಿಷ್ಠ ₹ 500 ದರ ಹಾಗೂ ಶೇ 3 ಶುಲ್ಕ ವಿಧಿಸಿದೆ. ಮೂರು ವರ್ಷಗಳಲ್ಲಿ 4.5 ಲಕ್ಷ ರೈತರಿಂದ ಒಟ್ಟು (ಎಲ್ಲ ಬೆಳೆಗಳು) 2.05 ಕೋಟಿ ಕ್ವಿಂಟಲ್ ಕೃಷಿ ಉತ್ಪನ್ನವನ್ನು ಸರ್ಕಾರ ಖರೀದಿಸಿದೆ ಎಂದರು.

ರಾಗಿ ಮತ್ತು ತೊಗರಿಗೆ ಕೇಂದ್ರ ಸರ್ಕಾರ ಘೋಷಿಸಿದ ಬೆಲೆಯು ಉತ್ಪಾದನಾ ವೆಚ್ಚಕ್ಕೆ ಸಮವಿಲ್ಲ. ಹೀಗಾಗಿ ರಾಜ್ಯ ಸರ್ಕಾರವು ರಾಗಿಗೆ ₹2,300 ಹಾಗೂ ಜೋಳಕ್ಕೆ ₹2,100 ಬೆಂಬಲ ಬೆಲೆ ನಿಗದಿ ಮಾಡಿದೆ. ಅಲ್ಲದೇ, 20 ಲಕ್ಷ ಕ್ವಿಂಟಲ್ (2014–15) ರಾಗಿ ಹಾಗೂ 35.22 ಲಕ್ಷ ಕ್ವಿಂಟಲ್ (2015–16) ತೊಗರಿಯನ್ನು ಸರ್ಕಾರವೇ ಖರೀದಿಸಿದೆ ಎಂದರು.

**ಭವಿಷ್ಯ:** ಭತ್ತ, ಹತ್ತಿ, ಕಡಲೆ, ದ್ರಾಕ್ಷಿ ಮತ್ತು ಸಾಂಬಾರ ಬೆಳೆಗಳನ್ನು ಹೊರತು ಪಡಿಸಿದರೆ, ಉಳಿದವುಗಳ ಧಾರಣೆ ಇಳಿಮುಖ ಕಾಣುವ ಸಾಧ್ಯತೆ ಇದೆ ಎಂದರು.

**ಎಪಿಎಂಸಿ:** ಕೃಷಿ ಉತ್ಪನ್ನಗಳ ವಹಿವಾಟು ಶೇ 36ರಷ್ಟು ಮಾತ್ರ ಎಪಿಎಂಸಿ ಮೂಲಕ ನಡೆಯುತ್ತಿದ್ದು, ಬೆಲೆ ನಿಗದಿಯೂ ಕ್ಲಿಷ್ಟಕರವಾಗಿದೆ. ಹಣ್ಣು ಮತ್ತು ತರಕಾರಿ ಪ್ರಮಾಣ ತೀರಾ ಕಡಿಮೆ ಇದೆ ಎಂದು ಅವರು ತಿಳಿಸಿದರು.

ಕಡಿಮೆ ಉತ್ಪಾದನೆ ಹಾಗೂ ಅಧಿಕ ಉತ್ಪಾದನಾ ವೆಚ್ಚಗಳ ಕಾರಣ ಕೃಷಿ ಲಾಭದಾಯಕವಾಗಿಲ್ಲ. ಅದಕ್ಕಾಗಿ ಯಾಂತ್ರೀಕರಣ, ಅಡಮಾನ ಸಾಲ, ವಿಕೇಂದ್ರೀಕರಣ ಸಲಹೆಗಳನ್ನು ನೀಡಲಾಗಿದೆ ಎಂದು ಅವರು ತಿಳಿಸಿದರು.

**ರಾಜ್ಯದಲ್ಲಿ ಕೃಷಿಹೊಂಡ ನಿರ್ಮಾಣ ಬಳಿಕ ಹೆಚ್ಚಾದ ಇಳುವರಿ**

**190%** ತರಕಾರಿ

**77%** ಏಕದಳ ಧಾನ್ಯ

**61%** ಹಣ್ಣು

**55%** ದ್ವಿದಳ ಧಾನ್ಯ



ಉತ್ಪಾದನಾ ವೆಚ್ಚ, ಕೆ.ಜಿ. ದರ ಇತ್ಯಾದಿಗಳನ್ನು ರೈತರು ಹೊಲದಲ್ಲೇ ನಿರ್ಧರಿಸಲು ಸಾಧ್ಯವಾದ ಆ್ಯಪ್ ಅನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ

**ಪ್ರಕಾಶ್ ಎನ್. ಕಮ್ಮರಡಿ**
ಅಧ್ಯಕ್ಷರು, ಕೃಷಿ ಬೆಲೆ ಆಯೋಗ

## ಮೆಕ್ಕೆ ಜೋಳ ಸಿರಿಧಾನ್ಯ!

'ಮೆಕ್ಕೆ ಜೋಳವನ್ನು ಎಂ.ಎಸ್. ಸ್ವಾಮಿನಾಥನ್ ವರದಿಯಲ್ಲಿ 'ಸಿರಿಧಾನ್ಯ' ಎಂದು ಪರಿಗಣಿಸಲಾಗಿದ್ದು, ರಾಜ್ಯ ಸರ್ಕಾರವು ಪಡಿತರದಲ್ಲೇ ವಿತರಿಸಬೇಕು' ಎಂದು ಕೇಂದ್ರ ಸರ್ಕಾರ ಷರತ್ತು ವಿಧಿಸಿದೆ. ಆದರೆ, ಸ್ವಾಮಿನಾಥನ್ ವರದಿಯು 'ಜೋಳ'ವನ್ನು ಸಿರಿಧಾನ್ಯ ಎಂದು ಉಲ್ಲೇಖಿಸಿರುವುದನ್ನು ಕೇಂದ್ರವು ತಪ್ಪಾಗಿ ಅರ್ಥೈಸಿಕೊಂಡಿದೆ. ಈ ಕುರಿತು 10 ಬಾರಿ ಪತ್ರ ಬರೆದರೂ ಪ್ರತಿಕ್ರಿಯೆ ಬಂದಿಲ್ಲ. ಇದರಿಂದಾಗಿ ₹1,425 ಬೆಂಬಲ ಬೆಲೆ ಘೋಷಿಸಿದರೂ, ಮೆಕ್ಕೆ ಜೋಳ ಖರೀದಿಯು ರಾಜ್ಯ ಸರ್ಕಾರಕ್ಕೆ ಕಷ್ಟವಾಗಿದೆ. ಆದರೂ, ರೈತರ ಹಿತದೃಷ್ಟಿಯಿಂದ ಮಧ್ಯಂತರ ವ್ಯವಸ್ಥೆ ಕೈಗೊಳ್ಳುವಂತೆ ರಾಜ್ಯ ಸರ್ಕಾರಕ್ಕೆ ಮನವಿ ಮಾಡಲಾಗುವುದು' ಎಂದು ಪ್ರಕಾಶ್ ಎನ್. ಕಮ್ಮರಡಿ ಹೇಳಿದರು.

ಸುದ್ದಿಗೋಷ್ಠಿ

# ಎಪಿಎಂಸಿಯಲ್ಲೇ ಬೆಳೆ ಮಾರಾಟ ಮಾಡಿ

## ■ ಬೆಂಬಲ ಬೆಲೆ ಕಾನೂನು ವ್ಯಾಪ್ತಿಗೆ ತರಲು ಸರ್ಕಾರಕ್ಕೆ ಸಲಹೆ ■ ಸಾಲ ಸೌಲಭ್ಯ ಸದ್ಬಳಕೆಯಾಗಲಿ

ಹಾವೇರಿ: ಸರ್ಕಾರ ಕೃಷಿ ಬೆಳೆಗಳಿಗೆ ಘೋಷಿಸುವ ಬೆಂಬಲ ಬೆಲೆಯನ್ನು ಕಾನೂನು ವ್ಯಾಪ್ತಿಗೆ ತರಲು ರಾಜ್ಯ ಸರ್ಕಾರಕ್ಕೆ ಸಲಹೆ ನೀಡಲಾಗಿದೆ ಎಂದು ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ। ಪ್ರಕಾಶ ಕಮ್ಮರಡಿ ತಿಳಿಸಿದರು.

ಅವರು ಶುಕ್ರವಾರ ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಕಾನೂನು ವಿಶ್ವವಿದ್ಯಾಲಯದ ತಜ್ಞರೊಂದಿಗೆ ಚರ್ಚಿಸಿ ಬೆಂಬಲ ಬೆಲೆಯನ್ನು ಕಾನೂನು ವ್ಯಾಪ್ತಿಗೆ ತಂದರೆ, ಸರ್ಕಾರ ಘೋಷಿಸಿದ ಬೆಂಬಲ ಬೆಲೆಗಿಂತ ಕಡಿಮೆ ದರದಲ್ಲಿ ಬೆಳೆ ಖರೀದಿಸಿದರೆ ಅಂತಹವರ ವಿರುದ್ಧ ಕಾನೂನು ಕ್ರಮ ಜರುಗಿಸಲು ಸಾಧ್ಯವಾಗುತ್ತದೆ ಎಂದರು.

ಕೃಷಿ ಉತ್ಪನ್ನಗಳೆಲ್ಲವೂ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಸ್ಥೆ ಮೂಲಕ ಮಾರಾಟವಾದರೆ ಸರ್ಕಾರಕ್ಕೆ ಸೂಕ್ತ ಬೆಂಬಲಬೆಲೆ ನಿಗದಿಪಡಿಸಲು ಸಾಧ್ಯವಾಗುತ್ತದೆ. ಆದರೆ ಕೃಷಿ ಉತ್ಪನ್ನಗಳು ಹೆಚ್ಚಾಗಿ ಖಾಸಗಿ ಮಾರುಕಟ್ಟೆಗಳ ಅನಧಿಕೃತವಾಗಿಯೇ ಮಾರಾಟವಾಗುವುದರಿಂದ ಸೂಕ್ತ ಬೆಂಬಲ ಬೆಲೆ ನಿಗದಿ ಸರ್ಕಾರಕ್ಕೂ ಕಷ್ಟವಾಗುತ್ತದೆ. ಹಾಗಾಗಿ ರೈತರು ಕೃಷಿ ಉತ್ಪನ್ನಗಳನ್ನು ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಸ್ಥೆ ಮೂಲಕವೇ ಮಾರಾಟ ಮಾಡಲು ಮುಂದಾಗಬೇಕು ಎಂದರು.

ರೈತರು ಮಾರಾಟ ಮಾಡಿದ ಬೆಳೆಗಳಿಗೆ ಒಂದು ತಿಂಗಳೊಳಗಾಗಿ ಹಣ ನೀಡದಿದ್ದರೆ ಬಡ್ಡಿಸಹಿತ ಪಾವತಿಸಬೇಕು. ಆಧುನಿಕ ತಂತ್ರಜ್ಞಾನ ಬಳಸಿಕೊಂಡು ರೈತರಿಗೆ ಬೆರಳ ತುದಿಯಲ್ಲಿ ಸಲಹೆ, ಮಾಹಿತಿ ಸಿಗುವ 'ಇ- ಸಲಹಾ ವ್ಯವಸ್ಥೆ' ಜಾರಿಗೆ ತರಬೇಕು. ರಾಗಿ ಹಾಗೂ ಹೈಬ್ರೀಡ್ ಜೋಳವನ್ನು ಬೆಂಬಲಬೆಲೆಯಲ್ಲಿ ಖರೀದಿಸಿ ಪಡಿತರದಲ್ಲಿ ವಿತರಿಸಬೇಕು. ಎಂ.ಎಸ್. ಸ್ವಾಮಿನಾಥನ್ ವರದಿ ಜಾರಿಗೆ ತರಬೇಕು ಎಂದು ಸರ್ಕಾರಕ್ಕೆ ಸಲಹೆ ನೀಡಲಾಗಿದೆ ಎಂದರು.

ಮೆಕ್ಕೆಜೋಳ ಉತ್ಪಾದನಾ ವೆಚ್ಚವನ್ನು ಒಂದು ಕ್ವಿಂಟಲ್‌ಗೆ 1477 ರೂ. ಆಗುತ್ತದೆ ಎಂದು ಆಯೋಗ ತಿಳಿಸಿದ್ದು ಸರ್ಕಾರ 1425 ರೂ. ನೀಡಲು ಸಿದ್ಧವಾಗಿದೆ. ಆದರೆ ಕೇಂದ್ರ ಸರ್ಕಾರ ಮೆಕ್ಕೆಜೋಳವನ್ನು ಆಹಾರಧಾನ್ಯವೆಂದು ಪರಿಗಣಿಸಿ ಇದನ್ನು ಪಡಿತರದಲ್ಲಿ ವಿತರಿಸಲು ಸೂಚಿಸಿರುವುದರಿಂದ ಗೊಂದಲ ಉಂಟಾಗಿದೆ. ಸರ್ಕಾರ ಗೊಂದಲ ಬಗೆಹರಿಸಿ ಬೆಂಬಲ ಬೆಲೆಯಲ್ಲಿ ಮೆಕ್ಕೆಜೋಳ ಖರೀದಿಸಲಿದೆ ಎಂದರು.

ಕೃಷಿ ಬೆಲೆ ಆಯೋಗದ ಸಲಹೆ ಮೇರೆಗೆ ಸರ್ಕಾರ 11 ಬೆಳೆಗಳಿಗೆ ಬೆಲೆ ನಿಗದಿಪಡಿಸಿ ರೈತರಿಂದ ಖರೀದಿಸಲು ಮುಂದಾಗಿದೆ. ತೊಗರಿ, ಜೋಳ, ರಾಗಿ, ಶೇಂಗಾ, ಉದ್ದು, ಹೆಸರು, ಸೂರ್ಯಕಾಂತಿ ಸೇರಿದಂತೆ ಇನ್ನಿತರ ಬೆಳೆಗಳನ್ನು ಸರ್ಕಾರ ಬೆಂಬಲ ಬೆಲೆಯಲ್ಲಿ ಖರೀದಿಸಲು ತಯಾರಿ ನಡೆಸಿದೆ ಎಂದರು.

ಈ ವರ್ಷ ಭತ್ತ, ಹತ್ತಿ, ಕಡಲೆ, ದ್ರಾಕ್ಷಿ ಹೊರತುಪಡಿಸಿ ಎಲ್ಲ ತೋಟಗಾರಿಕೆ ಹಾಗೂ ಸಾಂಬಾರು ಪದಾರ್ಥಗಳ ಬೆಲೆಯಲ್ಲಿ ಇಳಿಕೆ ಸಾಧ್ಯತೆ ಇದ್ದು ಆಯೋಗ ಉತ್ಪಾದನಾ ವೆಚ್ಚ ಲೆಕ್ಕ ಹಾಕಿ ಶೇ. 50ರಷ್ಟು ಲಾಂಭಾಂಶವಿಟ್ಟು ಬೆಂಬಲಬೆಲೆ ನಿಗದಿಪಡಿಸುವಂತೆ ಆಯೋಗ ಸರ್ಕಾರಕ್ಕೆ ಸಲಹೆ ನೀಡಿದೆ ಎಂದರು.

ಕೃಷಿ ಬೆಲೆ ಆಯೋಗ ಹಿಂಗಾರು ಮಳೆ ಆಧರಿಸಿ ರಾಜ್ಯದಲ್ಲಿನ ಕೃಷಿ ಹಾಗೂ ತೋಟಗಾರಿಕೆಯ 26 ಉತ್ಪನ್ನಗಳ ವಸ್ತುಸ್ಥಿತಿ ವರದಿಯನ್ನು ಅಂಕಿ-ಅಂಶಗಳ ಸಹಿತ ಸರ್ಕಾರಕ್ಕೆ ವರದಿ ಸಲ್ಲಿಸಿದೆ. ಆಯೋಗ ಈ ರೀತಿ ಕಳೆದ ಮೂರು ವರ್ಷಗಳಿಂದ ವರದಿ ಸಲ್ಲಿಸುತ್ತ ಬಂದಿದ್ದು ಸರ್ಕಾರದ ಸ್ಪಂದನೆ ಸಂಪೂರ್ಣ ತೃಪ್ತಿ ತರದಿದ್ದರೂ ಈ ವಿಚಾರವಾಗಿ ಇರುವ ಸೂಕ್ಷ್ಮತೆಯನ್ನು ಸರ್ಕಾರದ ಗಮನಸೆಳೆಯಲು ಸಾಧ್ಯವಾಗಿದೆ ಎಂದರು.

ಸರ್ಕಾರ ರೈತರಿಗೆ ಎರಡು ಲಕ್ಷ ರೂ. ವರೆಗೆ ಬಡ್ಡಿರಹಿತ ಅಡಮಾನ ಸಾಲ ನೀಡುತ್ತಿದ್ದು ಇದನ್ನು ಬಹಳಷ್ಟು ರೈತರು ಸದ್ಬಳಕೆ ಮಾಡಿಕೊಂಡಿಲ್ಲ, ಈ ಸೌಲಭ್ಯವನ್ನು ರೈತರು ಪಡೆದುಕೊಂಡು ತಮ್ಮ ಉತ್ಪನ್ನಗಳನ್ನು ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಸ್ಥೆ ಮೂಲಕ ಮಾರಾಟ ಮಾಡಬೇಕು ಎಂದರು. ಕೃಷಿ ಇಲಾಖೆ ಜಂಟಿ ನಿರ್ದೇಶಕ ರಾಜಶೇಖರ ಬಿಜಾಪುರ ಸುದ್ದಿಗೋಷ್ಠಿಯಲ್ಲಿದ್ದರು.



ಹಾವೇರಿ: ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ। ಪ್ರಕಾಶ ಕಮ್ಮರಡಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

### ಬೆಲೆ ಸ್ಥಿರತೆ ನಿಧಿ ಇಡಲು ಸಲಹೆ

**ಕೃಷಿ ಬೆಳೆಗಳ ಬೆಲೆ ಕುಸಿದಾಗ ರೈತರ ನೆರವಿಗೆ ಬರಲು ರಾಜ್ಯ ಸರ್ಕಾರ ಕನಿಷ್ಠ 5000 ಕೋಟಿ ರೂ. ಬೆಲೆ ಸ್ಥಿರತೆ ನಿಧಿ ಇಡಬೇಕು. ಕೃಷಿ ಉತ್ಪನ್ನ ಮಾರುಕಟ್ಟೆಯೇ ರೈತರ ಜಮೀನಿಗೆ ಹೋಗುವಂತಹ ವ್ಯವಸ್ಥೆಯಾಗಬೇಕು. ರೈತರ ಹೊಲದಲ್ಲಿಯೇ ಅವರ ಬೆಳೆಯ ಗುಣಮಟ್ಟ ಖಾತ್ರಿಪಡಿಸುವ ವ್ಯವಸ್ಥೆಯಾಗಬೇಕು. ಬೆಳೆಯನ್ನು ಹೊಲದಿಂದ ಮಾರುಕಟ್ಟೆಗೆ ಒಯ್ಯುವ ಸಾಗಣೆ ವೆಚ್ಚವನ್ನು ಸರ್ಕಾರವೇ ಭರಿಸಬೇಕು ಎಂದು ಕೃಷಿ ಬೆಲೆ ಆಯೋಗ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ ಎಂದು ಡಾ। ಪ್ರಕಾಶ ಕಮ್ಮರಡಿ ತಿಳಿಸಿದರು.**

# ಮೆಕ್ಕೆಜೋಳಕ್ಕೆ 1425 ರೂ. ನೀಡಲು ಸಿದ್ಧ

## ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ. ಕಮ್ಮರಡಿ ಭರವಸೆ | ರೈತರ ಬಳಿ ಖರೀದಿಗೆ ಆಯೋಗ ಶಿಫಾರಸು

■ ವಿಜಯವಾಣಿ ಸುದ್ದಿಜಾಲ ಹಾವೇರಿ

ರಾಜ್ಯ ಸರ್ಕಾರ ಬೆಂಬಲ ಬೆಲೆಯಲ್ಲಿ ಮೆಕ್ಕೆಜೋಳವನ್ನು 1,425 ರೂ.ಗಳಿಗೆ ಖರೀದಿಸಲು ಸಿದ್ಧವಿದೆ. ಆದರೆ, ಕೇಂದ್ರ ಸರ್ಕಾರ ಮೆಕ್ಕೆಜೋಳವನ್ನು ಆಹಾರ ಧಾನ್ಯವೆಂದು ಪರಿಗಣಿಸಿ, ಪಡಿತರದಲ್ಲಿ ವಿತರಿಸಲು ಸೂಚಿಸಿರುವುದರಿಂದ ಗೊಂದಲ ಉಂಟಾಗಿದೆ. ಶೀಘ್ರದಲ್ಲಿಯೇ ಗೊಂದಲ ಪರಿಹರಿಸಿ ಬೆಂಬಲ ಬೆಲೆಯಲ್ಲಿ ಮೆಕ್ಕೆಜೋಳವನ್ನು ಸರ್ಕಾರ ಖರೀದಿಸಲಿದೆ ಎಂದು ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ. ಪ್ರಕಾಶ ಕಮ್ಮರಡಿ ತಿಳಿಸಿದರು.

ನಗರದ ಪ್ರವಾಸಿ ಮಂದಿರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೆಕ್ಕೆಜೋಳ ಉತ್ಪಾದನಾ ವೆಚ್ಚ ಒಂದು ಕ್ವಿಂಟಾಲ್‌ಗೆ 1,477 ರೂ. ಆಗುತ್ತದೆ ಎಂದು ಆಯೋಗ ತಿಳಿಸಿದೆ. ಸರ್ಕಾರವೂ 1,425 ರೂ. ನೀಡಲು ಸಿದ್ಧವಿದೆ ಎಂದರು.

ಕೃಷಿ ಬೆಳೆಗಳ ಬೆಲೆ ಕುಸಿದಾಗ ರೈತರ ನೆರವಿಗೆ ಬರಲು ರಾಜ್ಯ ಸರ್ಕಾರ ಕನಿಷ್ಠ 5 ಸಾವಿರ ಕೋಟಿ ರೂ. ಬೆಲೆ ಸ್ಥಿರತೆ ನಿಧಿಯಿಡಬೇಕು. ಕೃಷಿ ಉತ್ಪನ್ನ ಮಾರುಕಟ್ಟೆಯೇ ರೈತರ ಜಮೀನಿಗೆ ಹೋಗುವ ವ್ಯವಸ್ಥೆಯಾಗಬೇಕು.



ರೈತರ ಹೊಲದಲ್ಲಿಯೇ ಅವರ ಬೆಳೆಯ ಗುಣಮಟ್ಟ ಖಾತ್ರಿಪಡಿಸುವ ವ್ಯವಸ್ಥೆಯಾಗಬೇಕು. ಬೆಳೆಯನ್ನು ಹೊಲದಿಂದ ಮಾರುಕಟ್ಟೆಗೆ ಒಯ್ಯುವ ಸಾಗಣೆ ವೆಚ್ಚವನ್ನು ಸರ್ಕಾರವೇ ಭರಿಸಬೇಕು ಎಂದು ಕೃಷಿ ಬೆಲೆ ಆಯೋಗ ಸರ್ಕಾರಕ್ಕೆ ಶಿಫಾರಸು ಮಾಡಿದೆ ಎಂದರು.

ಕೃಷಿ ಉತ್ಪನ್ನಗಳೆಲ್ಲವೂ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಸ್ಥೆ ಮೂಲಕ ಮಾರಾಟವಾದರೆ ಸರ್ಕಾರಕ್ಕೆ ಸೂಕ್ತ ಬೆಂಬಲ ಬೆಲೆ ನಿಗದಿಪಡಿಸಲು ಸಾಧ್ಯವಾಗುತ್ತದೆ. ಆದರೆ, ಕೃಷಿ ಉತ್ಪನ್ನಗಳು ಹೆಚ್ಚಾಗಿ ಖಾಸಗಿ ಮಾರುಕಟ್ಟೆಗಳಲ್ಲಿ ಅನಧಿಕೃತವಾಗಿಯೇ ಮಾರಾಟವಾಗುವುದರಿಂದ ಸೂಕ್ತ ಬೆಂಬಲ ಬೆಲೆ ನಿಗದಿಪಡಿಸಲು ಸರ್ಕಾರಕ್ಕೂ ಕಷ್ಟವಾಗುತ್ತದೆ. ಹಾಗಾಗಿ ರೈತರು ಕೃಷಿ ಉತ್ಪನ್ನಗಳನ್ನು ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಸ್ಥೆ ಮೂಲಕವೇ ಮಾರಾಟ ಮಾಡಬೇಕು. ರೈತರು ಮಾರಾಟ ಮಾಡಿದ ಬೆಳೆಗಳಿಗೆ ಒಂದು ತಿಂಗಳೊಳಗಾಗಿ ಹಣ ಪಾವತಿ ಮಾಡಲು ಆಗದಿದ್ದರೆ ಬಡ್ಡಿ ಸಹಿತ ರೈತರಿಗೆ ಹಣ ಪಾವತಿಸಬೇಕು. ರಾಗಿ ಹಾಗೂ ಹೈಬ್ರೀಡ್ ಜೋಳವನ್ನು ಬೆಂಬಲ ಬೆಲೆಯಲ್ಲಿ ಖರೀದಿಸಿ ಪಡಿತರದಲ್ಲಿ ವಿತರಿಸಬೇಕು. ಎಂ.ಎಸ್. ಸ್ವಾಮಿನಾಥನ್ ವರದಿ ಜಾರಿಗೆ ತರಬೇಕು ಎಂದು ಸರ್ಕಾರಕ್ಕೆ ಸಲಹೆ ನೀಡಲಾಗಿದೆ ಎಂದರು.

ಕೃಷಿ ಬೆಲೆ ಆಯೋಗದ ಸಲಹೆ ಮೇರೆಗೆ ಸರ್ಕಾರ 11 ಬೆಳೆಗಳಿಗೆ ಬೆಲೆ ನಿಗದಿಪಡಿಸಿ ರೈತರಿಂದ ಖರೀದಿಸಲು ಮುಂದಾಗಿದೆ. ತೊಗರಿ, ಜೋಳ, ರಾಗಿ, ಶೇಂಗಾ, ಉದ್ದು, ಹೆಸರು, ಸೂರ್ಯಕಾಂತಿ ಸೇರಿದಂತೆ ಇನ್ನಿತರ ಬೆಳೆಗಳನ್ನು ಸರ್ಕಾರ ಬೆಂಬಲ ಬೆಲೆಯಲ್ಲಿ ಖರೀದಿಸಲು ಚಿಂತನೆ ನಡೆಸಿದೆ ಎಂದರು.

ಸರ್ಕಾರ ರೈತರಿಗೆ ಎರಡು ಲಕ್ಷ ರೂ. ವರೆಗೆ ಬಡ್ಡಿ ರಹಿತ ಅಡಮಾನ ಸಾಲ ನೀಡುತ್ತಿದ್ದು ಇದನ್ನು ಬಹಳಷ್ಟು ರೈತರು ಸದ್ಬಳಕೆ ಮಾಡಿಕೊಂಡಿಲ್ಲ. ಈ ಸೌಲಭ್ಯವನ್ನು ರೈತರು ಪಡೆದುಕೊಂಡು ತಮ್ಮ ಉತ್ಪನ್ನಗಳನ್ನು ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಸ್ಥೆ ಮೂಲಕ ಮಾರಾಟ ಮಾಡಬೇಕು ಎಂದರು.

ಕೃಷಿ ಇಲಾಖೆ ಜಂಟಿ ನಿರ್ದೇಶಕ ರಾಜಶೇಖರ ಬಿಜಾಪುರ ಇತರರು ಸುದ್ದಿಗೋಷ್ಠಿಯಲ್ಲಿದ್ದರು.

### ಬೆಂಬಲ ಬೆಲೆ ಕಾನೂನು ವ್ಯಾಪ್ತಿಗೆ...

**ಕಾನೂನು ವಿಶ್ವವಿದ್ಯಾಲಯದ ತಜ್ಞರೊಂದಿಗೆ ಚರ್ಚಿಸಿ ಕೃಷಿ ಬೆಳೆಗಳಿಗೆ ಬೆಂಬಲಬೆಲೆಯನ್ನು ಕಾನೂನು ವ್ಯಾಪ್ತಿಗೆ ತರುವಂತೆ ಸರ್ಕಾರಕ್ಕೆ ಸಲಹೆ ನೀಡಲಾಗಿದೆ. ಇದು ಸಾಧ್ಯವಾದರೆ ಸರ್ಕಾರ ಘೋಷಿಸಿದ ಬೆಂಬಲಬೆಲೆಗಿಂತ ಕಡಿಮೆ ದರದಲ್ಲಿ ಬೆಳೆ ಖರೀದಿಸಿಸುವವರ ವಿರುದ್ಧ ಕಾನೂನು ಕ್ರಮ ಜರುಗಿಸಲು ಸಾಧ್ಯವಾಗುತ್ತದೆ ಎಂದು ಪ್ರಕಾಶ ಕಮ್ಮರಡಿ ತಿಳಿಸಿದರು.**

# ಖರೀದಿ ಕೇಂದ್ರ ಆರಂಭಿಸಲು ಆಗ್ರಹ

## ಕೃಷಿ ಆಯೋಗದ ಅಧ್ಯಕ್ಷ ಡಾ. ಪ್ರಕಾಶ ಕಮ್ಮರಡಿಯವರಿಗೆ ಮನವಿ

• **ಕನ್ನಡಪ್ರಭ ವಾರ್ತೆ** ಹಿರೇಕೆರೂರು

ತಾಲೂಕಿನಲ್ಲಿ ಬೆಂಬಲ ಬೆಲೆ ಖರೀದಿ ಕೇಂದ್ರ ತೆರೆಯದಿದ್ದರಿಂದ ಮೆಕ್ಕೆಜೋಳ, ಹತ್ತಿ ಹಾಗೂ ಶೇಂಗಾ ಮೊದಲಾದ ಬೆಳೆಗಳನ್ನು ಬೆಳೆದ ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಬೆಂಬಲ ಬೆಲೆ ಖರೀದಿ ಕೇಂದ್ರ ಆರಂಭಿಸಲು ತ್ವರಿತ ಕ್ರಮ ಜರುಗಿಸಬೇಕೆಂದು ಉತ್ತರ ಕರ್ನಾಟಕ ಅನ್ನದಾತರ ಸೇನೆಯ ಕಾರ್ಯಕರ್ತರು ರಾಜ್ಯ ಕೃಷಿ ಆಯೋಗದ ಅಧ್ಯಕ್ಷ ಡಾ. ಪ್ರಕಾಶ ಕಮ್ಮರಡಿಯವರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಉತ್ತರ ಕರ್ನಾಟಕ ಅನ್ನದಾತರ ಸೇನೆಯ ರಾಜ್ಯ ಸಂಚಾಲಕ ಹನುಮಂತಪ್ಪ ದಿವಿಗಹಳ್ಳಿ ಮಾತನಾಡಿ, ಹಾವೇರಿ ಜಿಲ್ಲೆಯಲ್ಲಿ 1.35,000 ಹೆಕ್ಟೇರ್ ಜಮೀನಿನಲ್ಲಿ ಜಿಲ್ಲೆಯ ಪ್ರಮುಖ ಬೆಳೆ ಮೆಕ್ಕೆಜೋಳ ಬಿತ್ತನೆ ಮಾಡಲಾಗಿದೆ. ಕಡಿಮೆ ಮಳೆ ಹಾಗೂ ಸೈನಿಕಹುಳು ಬಾಧೆಯಿಂದ ತತ್ತರಿಸಿ ಕಡಿಮೆ ಇಳುವರಿ ಬಂದಿದ್ದರೂ ಮಾರುಕಟ್ಟೆಯಲ್ಲಿ ವರ್ತಕರು ಕೇವಲ ₹ 1100ರಿಂದ ₹ 1130ರ ವರೆಗೆ ಬೆಲೆ ನಿಗದಿಪಡಿಸಿ ಮೆಕ್ಕೆಜೋಳ ಖರೀದಿ ಮಾಡುತ್ತಿದ್ದಾರೆ. ಈಗಾಗಲೇ ಜಿಲ್ಲೆಯಲ್ಲಿ ಪ್ರತಿಶತ 70ರಷ್ಟು ರೈತರು ಮಾರಾಟ ಮಾಡಿದ್ದಾರೆ. ಕೇಂದ್ರ ಸರ್ಕಾರ ಪ್ರತಿ ಕ್ವಿಂಟಲ್ ಮೆಕ್ಕೆಜೋಳಕ್ಕೆ ₹ 1450 ದರ ನಿಗದಿಪಡಿಸಿದ್ದರೂ ಸಹ ಇದು ರೈತರಿಗೆ ದೊರೆತಿಲ್ಲ. ಇದರ ಜೊತೆಯಲ್ಲಿ ರಾಜ್ಯ ಸರ್ಕಾರ ಪ್ರೋತ್ಸಾಹಧನ ಸೇರಿಸಿ ₹ 2000 ದರದಲ್ಲಿ ಖರೀದಿಸಬೇಕು. ಬೆಲೆ ಇದ್ದರೂ ರೈತರು ತುಂಬಾ ಹಾನಿ ಅನುಭವಿಸುವಂತಾಗಿದೆ. ಕಾರಣ ಸರ್ಕಾರ ಬೆಂಬಲೆ ಖರೀದಿ ಕೇಂದ್ರಗಳನ್ನು ನವೆಂಬರ್ ತಿಂಗಳಲ್ಲಿ ಆರಂಭಿಸಿದರೆ ರೈತರಿಗೆ ವರದಾನವಾಗುತ್ತಿದೆ. ಸರ್ಕಾರದ ವಿಳಂಬ ನೀತಿ ಇದು ವರ್ತಕರಿಗೆ ಹೆಚ್ಚಿನ ಲಾಭ ಮಾಡಿಕೊಟ್ಟಂತಾಗಿದೆ. ಈಗಾಗಲೇ 3 ವರ್ಷಗಳಿಂದ ಬರಗಾಲಕ್ಕೆ ಸಿಲುಕಿ ತತ್ತರಿಸಿದ ರೈತರ ನೆರವಿಗೆ ಎರಡೂ ಸರ್ಕಾರಗಳು ಮುಂದಾಗಬೇಕು. ಅದರಂತೆ ಹತ್ತಿ ಧಾರಣೆಯು ಕ್ವಿಂಟಲ್ ಒಂದಕ್ಕೆ ₹ 4500 ದರದಲ್ಲಿ ವರ್ತಕರು ಖರೀದಿಸುತ್ತಿದ್ದಾರೆ. ಇದು ರೈತರಿಗೆ ಅನ್ಯಾಯವಾಗುತ್ತಿದೆ. ಹತ್ತಿಗೆ ಬೆಂಬಲ ಬೆಲೆ ₹ 10 ಸಾವಿರ ನಿಗದಿಪಡಿಸಿ ಖರೀದಿಸಲು ಮುಂದಾಗಬೇಕು. ಶೇಂಗಾ, ತೊಗರಿ ಮೊದಲಾದ ಬೆಳೆಗಳನ್ನು ಖರೀದಿಸಲು ಖರೀದಿ ಕೇಂದ್ರಗಳನ್ನು ಆರಂಭಿಸಬೇಕೆಂದರು. ಜಿಲ್ಲೆಯಲ್ಲಿ ಸುಮಾರು 2000ಕ್ಕಿಂತ ಅಧಿಕ ರೈತರು ಆತ್ಮಹತ್ಯೆಗೆ ಶರಣಾಗಿದ್ದಾರೆ. ಈ ಕುರಿತು ರಾಜ್ಯ ಕೃಷಿ ಆಯೋಗದ ಅಧ್ಯಕ್ಷ ಡಾ. ಪ್ರಕಾಶ ಕಮ್ಮರಡಿಯವರಿಗೆ ಮನವಿ ಸಲ್ಲಿಸಿದರು. ದೇಶದಲ್ಲಿ ರೈತರಿಗೆ ಓಬೇರಾಯನ ಕಾಲದ ಕಾನೂನುಗಳೇ ಮುಂದುವರಿದಿದ್ದು ಹೊಸ ಕಾನೂನುಗಳನ್ನು ಬರಬೇಕೆಂದರು. ಉತ್ತರ ಕರ್ನಾಟಕ ಅನ್ನದಾತರ ಸೇನೆಯ ರಾಜ್ಯ ಪ್ರಧಾನ ಕಾಯದರ್ಶಿ ರಾಜಶೇಖರ ದೂದಿಹಳ್ಳಿ, ತಾಲೂಕು ಪ್ರಧಾನ ಕಾರ್ಯದರ್ಶಿ ತಿರುಪತಿ ಹಿರೇಮೊರಬ, ಮುಖಂಡ ಶಿವಯೋಗಿ ಕೆಂಚಳ್ಳಿ ಮೊದಲಾದವರಿದ್ದರು.



ಬೆಂಬಲ ಬೆಲೆ ಖರೀದಿ ಕೇಂದ್ರ ಆರಂಭಿಸಲು ತ್ವರಿತ ಕ್ರಮ ಜರುಗಿಸಬೇಕೆಂದು ಉತ್ತರ ಕರ್ನಾಟಕ ಅನ್ನದಾತರ ಸೇನೆಯ ಕಾರ್ಯಕರ್ತರು ರಾಜ್ಯ ಕೃಷಿ ಆಯೋಗದ ಅಧ್ಯಕ್ಷ ಡಾ. ಪ್ರಕಾಶ ಕಮ್ಮರಡಿ ಅವರಿಗೆ ಮನವಿ ಸಲ್ಲಿಸಿದರು.

## ತೊಗರಿ ಖರೀದಿ ಕೇಂದ್ರ ತೆರೆಯಲು ಸರ್ಕಾರಕ್ಕೆ ಮನವಿ

**ಹಾವೇರಿ:** ಬೆಂಬಲ ಬೆಲೆ ಯೋಜನೆಯಡಿಯಲ್ಲಿ ತೊಗರಿ ಖರೀದಿಸಲು ಜಿಲ್ಲೆಯಲ್ಲಿ ಖರೀದಿ ಕೇಂದ್ರಗಳನ್ನು ಆರಂಭಿಸುವಂತೆ ಜಿಲ್ಲಾಧಿಕಾರಿ ಡಾ. ಎಂ.ವಿ. ವೆಂಕಟೇಶ ಅವರು ಸಹಕಾರ ಇಲಾಖೆ ಕಾರ್ಯದರ್ಶಿಗಳಿಗೆ ಮನವಿ ಮಾಡಿದ್ದಾರೆ. ಹಾವೇರಿ ಜಿಲ್ಲೆಯ ವ್ಯಾಪ್ತಿಯ 2550 ಹೆಕ್ಟೇರ್ ಪ್ರದೇಶದಲ್ಲಿ ತೊಗರಿ ಬೆಳೆಯಲಾಗಿದೆ, ಕಟಾವು. ಆರಂಭವಾಗಿದೆ. 2017-18ನೇ ಸಾಲಿಗೆ ಬೆಂಬಲ ಬೆಲೆ ಯೋಜನೆಯಡಿ ತೊಗರಿಗೆ ಸರ್ಕಾರ ₹ 5,250+ 200 ರು.ರಂತೆ ಬೋನಸ್ ದರವನ್ನು ನಿಗದಿಪಡಿಸಲಾಗಿದೆ. ಜಿಲ್ಲೆಯಲ್ಲಿ ತೊಗರಿ ದರವು ಪ್ರತಿ ಕ್ವಿಂಟಾಲ್‌ಗೆ 3000 ದಿಂದ 4000 ರು. ವರೆಗೆ ಕುಸಿದಿದೆ. ರೈತರ ಹಿತದೃಷ್ಟಿಯಿಂದ ಸರ್ಕಾರವು ಮಧ್ಯಪ್ರವೇಶಿಸಿ ಕೂಡಲೇ ಖರೀದಿ ಕೇಂದ್ರಗಳನ್ನು ಹಾವೇರಿ ಜಿಲ್ಲೆಯಲ್ಲಿ ಆರಂಭಿಸುವಂತೆ ಪತ್ರ ಬರೆದು ಮನವಿ ಮಾಡಿಕೊಳ್ಳಲಾಗಿದೆ.